Reg No. M 1299 SATYAVADI ( Founded 1917 ) Daily & Weekly

# ಸತ್ಯವಾದಿ

ವಾರದ ಸಂಚಿಕೆ ( ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು )

ಸಂಪುಟ 28 ಸಂಚಿಕೆ 196 ] ಸೋಮವಾರ 30—4—45 [ 6 ಪೈ

## ಹಿಮ್ಲರನು ಹಿಟ್ಲರ್‌ನ್ನು ಕೊಂದಿರುವನೇ ?

### ಈ ವಾರದ ಭವಿಷ್ಯ

( ಓಂ ಜ್ಯೋತಿಷ್ಯರಿಂದ )

ಮೇಷ — ಅಲ್ಪ ಲಾಭ. ಸ್ವಲ್ಪ ಆಹಾರಾಲಸ್ಯ. ಮಾನಸಿಕ ಚಿಂತೆ. ಆಪ್ತರ ಸಂದರ್ಶನ. ಸಂತೋಷ ಕೂಟಗಳಲ್ಲಿ ಭಾಗವಹಿಸುವಿಕೆ ಇವುಗಳ ಸೂಚನೆಯಿದೆ.

ವೃಷಭ — ಉಗ್ರಾಣಿಗಳಿಗೆ ಕೈ ಹಾಕಬೇಡಿ. ಧನ ಸಂಬಂಧವಾದ ವ್ಯವಹಾರದಲ್ಲಿ ಕೈ ಹಾಕಬೇಡಿ ಶಾರೀರಿಕ ಸಮಾಧಾನಗಳಿಲ್ಲ.

ಮಿಥುನ — ಕುಟುಂಬದ ಚಿಂತೆ. ವ್ಯವಹಾರೋದ್ಯೋಗಗಳ ಸಂಬಂಧವಾದ ಚಿಂತೆ. ಅಂತೂ ಮನಸ್ಸೈರ್ಯವಿರುವುದಿಲ್ಲ. ದ್ರವ್ಯ ನಷ್ಟವೇನೂ ಆಗದಿಲ್ಲ.

ಕರ್ಕಾಟಕ — ದುಬಾರಿ ಖರ್ಚಿನ ಭಯವಿದೆ. ಧರ್ಮ ಕಾರ್ಯಗಳಲ್ಲಿ ಆಸಕ್ತಿ. ಸುಖ ಸಂಪದಗಳ ಪ್ರಾಪ್ತಿ ಯುಂಟು.

ಸಿಂಹ — ಸ್ವಜನರೊಂದಿಗೆ ಕಲಹ. ಅಧಿಕಾರಿಗಳಿಂದ ತೊಂದರೆ. ವ್ಯಾಪಾರದಲ್ಲಿ ನಷ್ಟ. ಆದರೂ ಆರೋಗ್ಯವು ಸರಿಯಾಗಿರುವುದು.

ಕನ್ಯಾ — ದೇಹದಲ್ಲಿ ಅನಾರೋಗ್ಯವಾಗುವ ಸಂಭವವಿದೆ. ಧನವ್ಯಯ ಮತ್ತು ಸಹಾನಿ, ಶೀಘ್ರೋಹಾನಿಯಾಗುವ ಸಂಭವವಿದೆ. ಮಾನಸಿಕ ಪರಿತಾಪ ಕೆಲವುಗಳ ಭಯವುಂಟು.

ತುಲಾ — ಶುಭಫಲಗಳ ಪ್ರಾಪ್ತಿ ಯಿದೆ. ವ್ಯಾಪಾರೋದ್ಯೋಗಗಳಲ್ಲಿ ಅಭಿವೃದ್ಧಿಯುಂಟು. ಇಷ್ಟ ಪ್ರಾಪ್ತಿಯೂ ಆಗುವುದು.

ವೃಶ್ಚಿಕ — ವ್ಯಾಪಾರ ವ್ಯವಹಾರಗಳಲ್ಲಿ ತೊಂದರೆ ಒಂದೂ ಪರಿಣಾಮವು ಶುಭಕಾರಿಯಾಗಿ ಆಗುತ್ತದೆ. ಧನವ್ಯಯ, ಸ್ಥಾನಾದಲ್ಲಿ ಕಷ್ಟ ಬಾಧೆಯ ಸೂಚನೆಯಿದೆ. ಕಾರ್ಯ ಸಿದ್ಧಿ

### ರೈಲಿನಲ್ಲಿ ದುರ್ಘಟನೆ

ಅಮೇರಿಕ ರೈಲು ಗಾಡಿಗಳಲ್ಲಿ ಹಿಂಭಾಗದಲ್ಲಿದ್ದ ಪ್ರಯಾಣಿಕರ ಕ್ಯಾಂಪಿಗೆ ಕಳುಹಿಸಲ್ಪಡುತ್ತಿದ್ದ ಪ್ರಯಾಣಿಕರಲ್ಲಿ ಕೆಲವರು ಆ ಗಾಡಿಗಳಲ್ಲಿ ಸತ್ತರಂತೆ ! ಇದುವರೆವಿಗೆ ಆ ಗಾಡಿಗಳಲ್ಲಿ ಪ್ರಯಾಣಿಕರನ್ನು ಸಾಗಿಸಿದ್ದರೂ ಈ ಕಠಿನವಾದ ಪ್ರಯೋಗವು ನಡೆದಿರಲಿಲ್ಲವಂತೆ. ಜನ ಸಂಚಾರೋಪಯೋಗ ಇದರ ಬಗ್ಗೆ ವಿಚಾರಣೆ ನಡೆಸುತ್ತಿರುವರಂತೆ.

### ಅಮೇರಿಕದ ವಶದಲ್ಲಿ

ಈಚಿಗೆ ಅಮೇರಿಕ 3 ನೇ ಸೇನೆಗೆ ಜರ್ಮನಿಯಲ್ಲಿ ಅಗಾಧ ಸಿರಿಯು ಸಿಕ್ಕಿತಷ್ಟೆ. 'ಡಿಫೊ ಮೂಟಿಕ್ ಲೆವಲ್' ವಿಷಯವಲ್ಲಿ ಇದನ್ನು ಮಿತ್ರ ಮಂಡಲಿಯವರು ಚರ್ಚೆ ಮಾಡುವರಂತೆ. ಅದು ನಮಗೆಲ್ಲರಿಗೂ ಆ ಐಶ್ವರ್ಯವು ಅಮೇರಿಕದ ವಶದಲ್ಲಿರುವುದೆ ಶೆ.

---

ಧನಸ್ಸು — ವ್ಯವಹಾರಗಳಲ್ಲಿ ಯಶಪ್ರಾಪ್ತಿ. ಉದ್ಯೋಗದಲ್ಲಿ ಅಭಿವೃದ್ಧಿ. ಆದರೆ ಧನವ್ಯಯ ಹೆಚ್ಚುವುದು.

ಮಕರ — ಶಾಲ ಮಾಡುವೆ ಆಲೋಚನೆಯನ್ನು ಬಿಡಿ. ಈಗ ವ್ಯವಹಾರದಲ್ಲಿ ಕಷ್ಟ ನಿಷ್ಠುರಗಳಿದ್ದರೂ ಶಕ್ತಿಯಿಂದ ಅನುಭವಿಸಿ 'ತಾಳಿದವನು ಬಾಳಿಯಾನು' ಎಂಬ ನಾಣ್ನುಡಿಯನ್ನು ನೆನೆಯಬೇಡಿ.

ಕುಂಭ — ಸಮಾಜದಲ್ಲಿ ಕೀರ್ತಿಯನ್ನು ಗಳಿಸುವಿರಿ ವ್ಯವಹಾರದಲ್ಲಿ ಅರ್ಥಾಭಿವೃದ್ಧಿ ಸಹೋದ್ಯೋಗಿಗಳಿಂದಲೂ ಅನುಕೂಲದಲ್ಲಿ ಅಧಿಕಾರಿವರ್ಗದಿಂದ ಹೆದರಬೇಡಿ. ಇಷ್ಟ ಕಾರ್ಯ ಸಿದ್ಧಿಯಾಗುವುದು.

ಮೀನ — ಹಿಮ್ಮೆ ವ್ಯವಹಾರದಲ್ಲಿ ವಿಘ್ನಗಳ ಭಯವುಂಟು. ವ್ಯಯ ಹೆಚ್ಚುವುದು. ಸಂಸಾರ ಸಂಬಂಧಗಳ [illegible]

### ಮೂಷಕ ಯಜ್ಞ

ಈಜಿಪ್ಟ್‌ನಲ್ಲಿ ಇಲಿಗಳ ಕಾಟವು ಹೆಚ್ಚಾಗಿರುವುದರಿಂದ, ಮೂಷಕ ಯಜ್ಞವು ಬಿರುಸಾಗಿ ಸಾಗುತ್ತಿದೆ.

### ಸೆರೆ ಸಿಕ್ಕಿದನು

ಮುಸೋಲಿನಿ ಜೊತೆಗೆ ಅವನ ಮಂತ್ರಿಗಳೂ ಸೇನಾಪತಿಗಳೂ ಹಿಡಿಯಲ್ಪಟ್ಟಿರವೆಂದೂ, ಇಟಲಿಯವರು ಮುಸಲೋನಿಯನ್ನು ಇಟಾಲಿಯನ್ನರ ಮೇಲೆ ಮಾಡಿದ ತಪ್ಪಿಗಾಗಿ ವಿಚಾರಣೆ ಮಾಡಬೇಕೆಂದಿರವರೆಂದೂ ವರದಿಯಾಗಿದೆ.

### ನಿರಾಕರಣೆ

ಜರ್ಮನಿಯ ಸ್ವಟ್ಜಾಟಿನ ಫ್ರೆಂಚರು ಅಮೇರಿಕನ್ನರಿಗೆ ಬಿಟ್ಟು ಕೊಡಬೇಕೆಂದು ಮಾಡಿದ ಕೇಳಿಕೆಯನ್ನು ಡಿಗಾಲರು ನಿರಾಕರಿಸಿದ್ದನ್ನು ಫ್ರೆಂಚ್ ಮಂತ್ರಿಮಂಡಲ ಒಪ್ಪಿದೆ.

### ಸೇರಿಸುವುದಿಲ್ಲ

ಸ್ವಿಟ್ಜರ್ಲೆಂಡಿಗೆ ಓಡಿ ಮುಸೋಲಿನಿ ಹೆಂಡತಿಗೆ ಆಶ್ರಯ ಕೊಡುವುದಿಲ್ಲವೆಂದು ಆ ಸರ್ಕಾರ ಹೇಳಿದೆ.

### ೧೮೦೦ ರೂ. ಜುಲ್ಮಾನೆ

ಸರಿಯಾದ ಲೈಸನ್ಸಿಲ್ಲದೆ ಹೆಸರನ್ನು ಕೊಂಡು ಹೊರಗೆ ಕಾಣಿಸಿದ್ದಕ್ಕಾಗಿ ಹೊಸಪೇಟೆಯ ಒಬ್ಬ ವ್ಯಾಪಾರಿಗೆ ಹೊಂದು ಸಾವಿರ ರೂಪಾಯಿಗಳ ಜುಲ್ಮಾನೆ ಯಾಗಿದೆ.

### ಒಪ್ಪಿದ [illegible]

### ಹಿಟ್ಲರ್ ಸತ್ತನೇ ?

ಹಿಮ್ಲರನು ಎರಡು ದಿವಸಗಳ ಹಿಂದೆ ಯೇ ಹಿಟ್ಲರನು ಇನ್ನು 24 ಘಂಟೆಗಳೂ ಬದುಕಲಾರನೆಂದು ಹೇಳಿದ್ದನೆಂದೂ ಮುತ್ತು ಜರ್ಮನಿಯು ಶರಣಾಗತವಾಗುವ ವಿಷಯದಲ್ಲಿ ಸತ್ಯತೆಯನ್ನು ತೋರಿಸಲು ಹಿಟ್ಲರನ ಶವವನ್ನು 24 ಘಂಟೆಗಳಲ್ಲಿ ತೋರಿಸುತ್ತೇನೆಂದು ಹೇಳಿರುವುದನ್ನು ನೋಡಿದರೆ ಹಿಮ್ಲರನು ಹಿಟ್ಲರ್‌ನ್ನು ಕೊಂದಿರಬಹುದೆಂದು ನಂಬಬೇಕಾಗಿದೆ.

### ಜರ್ಮನಿ ಶರಣಾಯಿತು

ಜರ್ಮನಿಯು ಯಾವ ವಿಧವಾದ ಶರತ್ತುಗಳಿಲ್ಲದೆ ಮಿತ್ರರಾಷ್ಟ್ರಗಳಿಗೆ ಶರಣಾಗತವಾಯಿತೆಂದು ಹೇಳಲಾಗಿದೆ.

### ರಾಜೀನಾಮೆಯೇ ?

ಸಾರ್ವಭೌಮ ಸರ್ಕಾರವು ಧಾರ್ಮಿಕ ಸಮಸ್ಯವನ್ನು ಪರಿಹರಿಸದಿದ್ದುದರಿಂದ ವೇವಲ್ ರಾಜೀನಾಮೆ ಕೊಡುವುದಾಗಿ ತಿಳಿಸಿರುವರಂತೆ.

### ಮುಸಲೋನಿ ವಧೆ !

ಮಿಲಾನ್‌ನಲ್ಲಿ ಮುಸೋಲಿನಿ ಮತ್ತು ಅವನ ಅನುನಾಯಿಗಳ ಶವಗಳನ್ನು ಕಡೆದು ಹೆಣಗಳನ್ನು ರಸ್ತೆಗಳಲ್ಲಿ ಎಸೆದಿರುವುದಾಗಿ ಹೇಳಲಾಗಿದೆ.

### ಶರಣಾಗತಿ ವಾಯಿತು

ಬರ್ಮಾದಲ್ಲಿ ಜಪಾನರ ಸೇನೆಯನ್ನು ಮಿತ್ರ ಸೈನ್ಯವು ಮಧ್ಯೆ ಸುಗ್ಗಿ ಎಕರೆ ಭಾಗವನ್ನಾಗಿ ಒಡೆದಿದೆ.

### ಮದ್ರಾಸ್ ಕೋಟೆ

[illegible]

# ವಾರ್ತಾತರಂಗ

ರಣರಂಗದ ಸುದ್ದಿಗಳು ಬ್ರಿಟಿಷ್ ಸಾರ್ವಭೌಮರಿಗೆ ತಡವಾಗಿ ತಲುಪುತ್ತಿರುವುದರಿಂದ ಇನ್ನುಮುಂದೆ ಸುದ್ದಿಗಳನ್ನು ಶ್ವರೆಯೂಗಿ ತಿಳಿಯುವ ಸಲುವಾಗಿ ಫೋನಿನ ಮೂಲಕ ತಿಳಿಸಬೇಕೆಂದು ಅಸ್ಪಣೆ ಮಾಡಿದ್ದಾರೆ.

೦ ೦

ಫ್ರಸ್ಕೋ ಸಮ್ಮೇಳನಕ್ಕೆ ಬರುವ ಪ್ರತಿನಿಧಿಗಳಿಗೆ 'ಗೈಡ್' ಗಳಾಗಿ ಸಹಾಯ ಮಾಡಲು 700 ಹುಡುಗಿಯರು ತರಬೇತು ಮಾಡಲ್ಪಡುತ್ತಿದ್ದಾರೆ.

೦ ೦

ಭಾರತ ವಿಷಯದಲ್ಲಿ ಲಾರ್ಡ್ ವೇವೆಲ್ ಮತ್ತು ಮಿ. ಎಮರಿಯವರಿಗೆ ದೀರ್ಘ ಮಾತು ಕತೆಗಳು ನಡೆಯುತ್ತಿರುವುದರಿಂದ ರಾಜಕೀಯ ಭಾಗಗಳಲ್ಲಿ ವಿವಿಧ ಯೋಚನೆಗೆ ಅವಕಾಶವಾಗಿದೆ. ಎಮರಿ ಮತ್ತು ವೇವೆಲ್ಲರಿಗೆ ಭಾರತ ಬಿಕ್ಕಟ್ಟು ಪರಿಹಾರದ ವಿಷಯದಲ್ಲಿ ಮತಭೇದವುಂಟಾಗಿ, ಭಾರತದ ಬಿಕ್ಕಟ್ಟಿನ ಮಧ್ಯೆಮತ್ತೊಂದು ಚಿಕ್ಕ ಬಿಕ್ಕಟ್ಟುಂಟಾಗಿದೆಯೆಂದು ಹೇಳಲಾಗಿದೆ.

೦ ೦

ನಾಗಪುರದ ವ್ಯವಸಾಯದ ಕಾಲೇಜಿನ ವಿದ್ಯಾರ್ಥಿಗಳು ಜನವರಿ 26 ರಲ್ಲಿ (ಭಾರತದ ಸ್ವಾತಂತ್ರ್ಯದ ದಿವಸ) ಪಾಠಶಾಲೆಗೆ ಹೋಗದೆ ತಪ್ಪಿಸಿ ಕೊಂಡರು. ಸರಿಯಾದ ಕಾರಣ ತಿಳಿಸದಿದ್ದರಿಂದ ಬೇಸಿಗೆ ರಜಾ ಮುಗಿಯುವ ತನಕ ಅವರನ್ನು ಪಾಠಶಾಲೆಗೆ ಸೇರಿಸಲಾಗುವುದಿಲ್ಲವೆಂದು ಅಲ್ಲಿಯ ಪ್ರಿನ್ಸಿಪಾಲರಾದ ಬರ್ಚ್‌ಲ್ಲರು ತಿಳಿಸಿದಾರೆ.

೦ ೦

ನೆಹರು ಮತ್ತು ನರೇಂದ್ರ ದೇವರನ್ನು ಒಬ್ಬೆಲ್ ಕಾರಾಗೃಹದಲ್ಲಿಟ್ಟಿರುವರೆಂದೂ, ಅಲ್ಲಿ ಓಡಾಡಲೂ ಕೂಡ ಆಗದಷ್ಟು ಸ್ಥಳ ಕಿರಿದೆಂದೂ, ದೀಪದ ಸಾಕಾರ್ಯವಿಲ್ಲವೆಂದು ಹೇಳಲಾಗಿದೆ.

೦ ೦

ಟೋಕಿಯೋವು ಈಗಾಗಲೇ ಮಿತ್ರ ಧಾಳಿಯಿಂದ ಅರ್ಧ ನಾಶವಾಗಿದೆ ಎಂದೂ, ಜೂನ್ ತಿಂಗಳೊಳಗೆ ಪೂರ್ತಿ ನಾಶವಾಗುವುದೆಂದೂ ಅಮೇರಿಕ ವೈಮಾನಿಕನೊಬ್ಬನು ಹೇಳುತ್ತಾನೆ.

ಗಾಂಧೀಜಿಯವರು 14 ಭಾಷೆಗಳಲ್ಲಿ ರಾಜಿ ಮಾಡಬಲ್ಲರು.

೦ ೦

ನೆಲ್ಲೂರಿನಲ್ಲಿ ಒಬ್ಬ ಮುಸ್ಲಿಂ ಹುಡುಗಿಯು ಹಿಂದೂ ಮತಕ್ಕೆ ಸೇರಿ, ಒಬ್ಬ ವೈಶ್ಯನನ್ನು ವಿವಾಹವಾದಳು.

೦ ೦

ಸಮ್ಮೇಳನಕ್ಕಾಗಿ ಬಂದಿರುವ ಜನಗಳಿಂದ ಸಾಕಷ್ಟು ಫ್ರಾನ್ಸಿಸ್ಕೋನ ಐನೂರು ಹೋಟಲುಗಳು ಆಗಲೇ ಭರ್ತಿಯಾಗಿವೆ.

೦ ೦

ಬುರ್ಜ್‌ವಾಲ್ಡನ ನಾಜೀ ಕಾಕ್‌ಸೆಂಟ್ರೈಷನ್ ಕ್ಯಾಂಪು ಅಂದರೆ ಕಾಂಫ್ರೀಷಾಕ ನರಕಕ್ಕೆ ಕಡಿಮೆಯೇನೂ ಇಲ್ಲವೆಂದು ಹೇಳಲಾಗಿದೆ ಈಗ ಇವೆಲ್ಲವನ್ನು ವಿಮೋಚಕರು ಆಕ್ರಮಿಸಿರುವುದರಿಂದ, ಜರ್ಮನ್ ಖೈದಿಯಾಗಿದ್ದ ನರು ಅಲ್ಲಿಯ ಸಾವಿರ ಮಂದಿ ನಾಗರೀಕರನ್ನು ಕರೆತರಿಸಿ ಈ ನರಕದಲ್ಲಿನ ಅಗಾಧ ಹಿಂಸೆಗಳನ್ನು ತೋರಿಸಿರುವರು. ಅಲ್ಲಿ ಜನಗಳನ್ನು ಚಿತ್ರ ಹಿಂಸೆಗೆ ಒಳಪಡಿಸುತ್ತಿದ್ದರು, ಜೀವ ಸಹಿತ ಸುಡಲ್ಪಡುತ್ತಿದ್ದರು.

೦ ೦

ಹಿಟ್ಲರಿನ ವಿಷಯದಲ್ಲಿ ಲಂಡನ್ನಿಗೆ ತಲುಪಿರುವ ವರ್ತಮಾನದಂತೆ, ಅವನು ಮೂರು ವಾರಗಳ ಹಿಂದೆ ಸಿನಿಮಾ ತಾರೆ ಓಲ್ಗಾಸ್ಕೆಹೆಹೋವಾಳನ್ನು ವರಿಸಿದನೆಂದೂ, ವಿವಾಹ ಮಹೋತ್ಸವವು ಹಿಟ್ಲರಿನ ಕೇಂದ್ರ ಸ್ಥಾನದಲ್ಲಿ ನಡೆಯಿತೆಂದೂ, ಒಂದು ಖಾಸಿ ಪಾರ್ಟಿ ನಡೆಯಿತೆಂದೂ, ನೂತನ ದಂಪತಿಗಳು ಮಧುವಾಸಕ್ಕಾಗಿ ಬೆನೇರಿಯಾದಲ್ಲಿನ ಹಿಟ್ಲರಿನ ವಾಸಸ್ಥಾನಕ್ಕೆ ಹೋಗಿರುವರೆಂದೂ ಹೇಳಲಾಗಿದೆ.

೦ ೦

ಅಮೇರಿಕಾ ಲೆಂಡ್ ಲೀಜ್ ವಸೂಡೆ ಪ್ರಕಾರ 22500೦ ಫ್ರೆಂಚಂಗೆ ಆಯುಧಗಳನ್ನೂ ಸಾಮಗ್ರಿಗಳನ್ನು ಕೊಟ್ಟಿರುವುದಕ್ಕಾಗಿ ಫ್ರೆಂಚ್ ರಿಪಬ್ಲಿಕ್ ರಾಯಭಾರಿ ಜೀಕ್ ಮೊನೆಟ್ಟರು ಅಮೇರಿಕಾದವರನ್ನು ಪ್ರಶಂಸಿಸಿದ್ದಾರೆ.

೦

ವಿಜಯವು ದೊರೆತನಂತರ ಸ್ಟಾಲಿನ್ನರು ಲಂಡನ್ನಿಗೆ ಭೇಟಿ ಕೊಡುವರೆಂದು ಲಂಡನ್ 'ರೇನಾಲ್ಡ್ಸ್ ನ್ಯೂಸ್' ಪತ್ರಿಕೆ ಪ್ರಕಟಿಸಿದೆ.

# ಕಳೆದವಾರ

ಜಪಾನಿನ ಮೇಲಿನ ಯುದ್ಧ ಈ ವರ್ಷ ಮುಗಿಯಬಹುದೆಂದು ಆಸ್ಟ್ರೇಲಿಯಾ ಮಂತ್ರಿಯವರು ಅಭಿಪ್ರಾಯ ಪಟ್ಟಿದ್ದಾರೆ.

ಪ್ರಜೆಗಳೆಲ್ಲರೂ ಆಯುಧಧಾರರಾಗಿ ಜುಗೋಸ್ಲೋವಿಕಿಯಾದಲ್ಲಿ ಜರ್ಮನರಿಗೆದರಾಗಿ ದಂಗೆಯೆದ್ದು ಕಿರುಕಳಿಯುದ್ಧ ಮಾಡಬೇಕೆಂದು ಕೊಟೋವಿಯಸ್ ನಲ್ಲಿರುವ ಜುಗೋಸ್ಲೋವಿಕಿಯಾ ಸರಕಾರವು ಜಿಕ್ಕರನ್ನು ಕೇಳಿಕೊಂಡಿದೆ.

ಲಂಡನ್ ಏ 23— ರಷ್ಯನ್ನರೇ ಬರ್ಲಿನ್ನನ್ನು ಆಕ್ರಮಿಸುವರೆಂಬ ಶಂಕೆಯು ಬ್ರಿಟಿಷ್ ಮತ್ತು ಅಮೇರಿಕನ್ನರಲ್ಲಿ ಹುಟ್ಟಿರುವುದೆಂದು ಹೇಳಲಾಗಿದೆ. ಮಾಸ್ಕೋದಲ್ಲಿ ಒಂದು ಸ್ವತಂತ್ರ ಬರ್ಲಿನ್ ಸಮಿತಿಯು ಈಗಾಗಲೇ ಸ್ಥಾಪಿತವಾಗಿರುವುದು ಈ ಕಳವಳಕ್ಕೆ ಹೆಚ್ಚು ಉತ್ತೇಜನ ಕೊಡುವಂತಿದೆ.

ರಾಮರಾಜ್ಯ ಚಿತ್ರಕ್ಕೆ ಈ ತಿಂಗಳು 26 ಕ್ಕೆ 87 ವಾರ ಪೂರ್ತಿಯಾಗುವುದು. ಜನರ ಪ್ರೋತ್ಸಾಹ ಏನೂ ಕಮ್ಮಿಯಾಗಿಲ್ಲವೆಂದೂ, ಆದರೂ ಇತರ ಚಿತ್ರಗಳಿಗೆ ಅವಕಾಶ ದೊರೆಯಲೆಂಬ ಅಭಿಲಾಷೆಯಿಂದ ನಿಲ್ಲಿಸುವರೆಂದು ಹೇಳಲಾಗಿದೆ.

ಭಾರತದಲ್ಲಿನ ಕ್ಯಾನಸಿವಾರಣೆಗಾಗಿ ಅವೇರಿಕಾದಲ್ಲಿ ತಿಂಗಳಿಗೆ 100000 ಡಾಲರು ಶೇಖರಿಸಬೇಕೆಂದು ಅಲ್ಲಿಯ ಪ್ರಮುಖ ಪತ್ರಿಕೆಯೊಂದು ಬರೆದಿದೆ.

ಎರಡು ಕೋಟಿ ಡಾಲರುಗಳು ಬೆಲೆ ಬಾಳುವ ಸಿರಿಯೊಂದಿಗೆ ಗೋರಿಂಗರು ಸಂತೋಷದ ಸಮೇತರಾಗಿ ಬರ್ಲಿನ್ ಬಿಟ್ಟು ಎತ್ತಲೋ ಪರಾರಿಯಾದರು.

ಬರ್ಲಿನ್ ಇಲ್ಲೀವರೆಗೆ 282 ಸಾರಿ ಬಾಂಬು ಮಾಡಲ್ಪಟ್ಟಿದೆ

ಭಾರತ ರಕ್ಷಣಾ ಕಾನೂನಿನ ಮೇರೆ 6 ಮಂದಿ ಕೋಟ್ಯಾಧೀಶ್ವರರು ಹಲವು ಕಂಪನೀರುಗಳಿಗಾಗಿ ದಸ್ತಗಿರಿ ಮಾಡಲ್ಪಟ್ಟು ಕೈ ಬೇಡಿಗಳೊಡನೆ ಕೋರ್ಟಿಗೆ ತರಲ್ಪಟ್ಟರು. ಮ್ಯಾಜಿಸ್ಟ್ರೇಟರು ಇವರನ್ನು ಜಾಮೀನಿನ ಮೇಲೆ ಬಿಟ್ಟರು.

ನಾರ್ವೆಯಲ್ಲಿ ಭಾರೀ ಜರ್ಮನ್ ಸೈನ್ಯವಿದೆಯೆಂದೂ, ದೊಡ್ಡದೊಡ್ಡ ನಾಜಿಗಳು ಹಾಸ್ಲೋ ಆಡಳಿಯಲ್ಲಿ ಅವಿತು ಕೊಂಡಿರುವರೆಂದೂ ಹೇಳಲಾಗಿದೆ.

ಪಥಪ್ ಚಿತ್ರದಲ್ಲಿ ಅತ್ಯುತ್ತಮ ರೀತಿಯಲ್ಲಿ ಅಭಿನಯಿಸಿ 1944ರ ಶ್ರೇಷ್ಠ ನಟ ಎಂದು ಗೌರವ ದೊರೆತ ಶ್ರೀ ಮೆಹತಾಬಿಗೆ ಸ್ವರ್ಣ ಪದಕ ಕೊಡಲಾಯಿತು.


ಶುದ್ಧವಾದುದೆಂದು ಗ್ಯಾರಂಟಿ. ಯಾವ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡು ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಸಾವರ್ಣ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ.

ಅಲ್ಲದೆ ಪುಡಿ ಮಿಶ್ರ ವಿಮಿಶ್ರ ಕೇಸರಿಯನ್ನು 16|1 ತೊಲ, 8|1 ತೊಲ, 4|1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯಾಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟಲ್ ಉಪಯೋಗಕ್ಕೆ ಉಪಯುಕ್ತವಾದುದ್ದು, ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಕೊಳ್ಳುವರು. ಮತ್ತು —

ವಲ್ಲಭದಾಸ್ ತೇಜ್‌ಪಾಲ್ ಹಿಂಗು, ಕೇಸರಿ, ಪಚ್ಚಕರ್ಪೂರ ವರ್ತಕರು
14. ಗೋವಿಂದಪ್ಪ ನಾಯಿಕ' ಬೀದಿ ಚಿ.ಟಿ. ಮದರಾಸ್.